ಮಾತನಾಡಿದ್ದೇನೆ. ಈ ವರ್ಷ ನಾನೂ ಹೇಳುತ್ತೇನೆ ಅವರಿಗೆ, ಸಂಬಂಧಪಟ್ಟ ಮಂತ್ರಿಗಳಿಗೂ ಹೇಳುತ್ತೇನೆ, ಅಧಿಕಾರಿಗಳಿಗೂ ಹೇಳಿ ನಿಮ್ಮ ಕಡೆ ಪಿ.ಯು. ಕಾಲೇಜಿಗೆ ಸೈನ್ಸ್ ಸೆಬ್ಜೆಕ್ಟ್‌ನ್ನು ಕೊಡಿಸೋಣ. ಇದಾದ ಮೇಲೆ ನಾವು ಎರಡು ವರ್ಷವಾದ ಮೇಲೆ ಫಸ್ಟ್ ಗ್ರೇಡ್ ಕಾಲೇಜಿಗೆ ಸೈನ್ಸ್ ಕೊಡುತ್ತೇವೆ.

165 (2354) **ಶ್ರೀ ಬಸವರಾಜ ರಾಯರೆಡ್ಡಿ** (ಯಲಬುರ್ಗ) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ರಾಜ್ಯದಲ್ಲಿಯ ಜಿಲ್ಲಾ ತಾಲ್ಲೂಕು ಆಸ್ಪತ್ರೆಯ ಪ್ರಾಥಮಿಕ ಆರೋಗ್ಯ ಕೇಂದ್ರವು ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸರ್ಕಾರದ ವತಿಯಿಂದ ಔಷಧಿಗಳನ್ನು ಖರೀದಿ ಮಾಡಲಾಗುತ್ತಿರುವುದು ನಿಜವಲ್ಲವೇ.

ಆ) ಯಾವ ಯಾವ ಪ್ರಮಾಣದಲ್ಲಿ ಈ ಆಸ್ಪತ್ರೆಗಳಿಗೆ ಪ್ರತಿ ವರ್ಷ ಔಷಧಿಗಳನ್ನು ಖರೀದಿ ಮಾಡಲಾಗುತ್ತಿದೆ (ಜಿಲ್ಲಾವಾರು ವಿವರಣೆ ನೀಡುವುದು)

ಇ) ಸದರಿ ಔಷಧಿಗಳನ್ನು ಖರೀದಿಯಲ್ಲಿ ಆಳವಡಿಸಿರುವ ಮಾನದಂಡಗಳೇನು ಹಾಗೆ ಯಾರಿಂದ ಖರೀದಿಸಲಾಗುತ್ತಿದೆ.

ಈ) ಖರೀದಿಸಿದ ಔಷಧಿಗಳು ಗುಣಮಟ್ಟವಿಲ್ಲದ ಔಷಧಿಗಳೆಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಉ) ಹಾಗಿದ್ದಲ್ಲಿ ಇಂತಹ ಗುಣಮಟ್ಟವಿಲ್ಲದ ಔಷಧಿಗಳನ್ನು ಖರೀದಿಸುವವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಊ) ರಾಜ್ಯದಲ್ಲಿರುವ ಆಸ್ಪತ್ರೆಗಳಿಗೆ ಸರ್ಕಾರವೇ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾಗ್ಯೂ ಎಲ್ಲಾ ಆಸ್ಪತ್ರೆಗಳಲ್ಲಿಯೂ ರೋಗಿಗಳಿಂದ ಹಣ ಪಡೆದು ಚಿಕಿತ್ಸೆ ನೀಡುತ್ತಿರುವುದು ಅಲ್ಲವೇ, ಔಷಧಿಗಳನ್ನು ರೋಗಿಗಳಿಗೆ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಋ) ಇಂತಹ ವೈದ್ಯರುಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು

(ಸಂಪೂರ್ಣ ಮಾಹಿತಿ ನೀಡುವುದು) ?

ಶ್ರೀ ಎನ್. ಚೆಲುವರಾಯ ಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಆರೋಗ್ಯ ಸಂಸ್ಥೆಗಳಿಗೆ ಸರ್ಕಾರಿ ಔಷಧಿ ಮಳಿಗೆಯಿಂದ ಶೇಕಡವಾರು ಭಾಗ ಅನುದಾನವಷ್ಟು ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಶೇಕಡ 60 ಭಾಗವನ್ನು ಅನುದಾನಕ್ಕೆ ಔಷಧಿ ಸರಬರಾಜು ಮಾಡಲಾಗುತ್ತಿದೆ. ರಾಜ್ಯ ವಲಯದ ಆರೋಗ್ಯ ಸಂಸ್ಥೆಗಳಿಗೆ ಸರ್ಕಾರಿ ಔಷಧ ಮಳಿಗೆಯಿಂದ ಶೇಕಡ 80 ಭಾಗ ಅನುದಾನದಲ್ಲಿ ಮತ್ತು ಶೇಕಡ 20 ಭಾಗ ಈ ಸಂಸ್ಥೆಗಳ ಅನುದಾನದಲ್ಲಿ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ. (ಜಿಲ್ಲಾವಾರು ಅನುದಾನದ ಪಟ್ಟಿ ಲಗತ್ತಿಸಿದೆ)

ಇ) ವಿವಿಧ ಆರೋಗ್ಯ ಸಂಸ್ಥೆಗಳ ಬೇಡಿಕೆಗನುಗುಣವಾಗಿ ಈ ಸಂಸ್ಥೆಗಳಿಗೆ ನಿಗದಿ ಇರುವ ಅನುದಾನದ ಮಿತಿಯಲ್ಲಿ ಸದರಿ ಔಷಧಿಗಳನ್ನು ಚಾಲ್ತಿಯಲ್ಲಿರುವ ದರ ಗುತ್ತಿಗೆದಾರರಿಂದ ಖರೀದಿಸಲಾಗುತ್ತಿದೆ.

ಈ) ಬಂದಿರುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಬಂದಿದೆ

ರೋಗಿಗಳಿಂದ ಹಣ ಪಡೆದು ಚಿಕಿತ್ಸೆ ನೀಡುತ್ತಿರುವ ಒಟ್ಟು 20 ಪ್ರಕರಣಗಳು ಪತ್ತೆಯಾಗಿದೆ. ಔಷಧಿಗಳನ್ನು ರೋಗಿಗಳಿಗೆ ನೀಡದೇ ಇದ್ದ ಯಾವುದೇ ಪ್ರಕರಣಗಳು ಇರುವುದಿಲ್ಲ.

ಋ) ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆಷ್ಟು ಕ್ರಮ ಜರುಗಿಸಲು ಇಲಾಖಾ ವಿಚಾರಣೆ ನಡೆಯುತ್ತಿದೆ.

Question No. 2354

STATEMENT SHOWING THE EDUCATIONAL LOCATION FOR VARIOUS INSTITUTIONS (CONSOLIDATED) OF THE DISTRICTS FOR THE YEAR 2004-2005

Sl. No.	District	Budget
1.	Gulbargar	20465000
2.	Yadgir	4092000
3.	Bidar	7060000
4.	Bijapur	9070000
5.	Bagalkote	5730000
6.	Shimoga	13775000
7.	Chikkamagalore	8985000
8.	Mangalore	25619127
9.	Udupi	7785000
10.	Mysore	35179806
11.	Chamarajanagar	6095000
12.	Belgaum	25411000
13.	Uttarakannada	8705000
14.	Bellary	5557000
15.	Chitradurga	8402000
16.	Raichur	7057000
17.	Koopal	4750000
18.	Dharwad	5420000
19.	Gadag	5148000
20.	Davanagere	23180000
21.	Haveri	6130000
22.	Kolar	15972000
23.	Tumkur	11663000
24.	Mandya	11415000
25.	Hassan	12910000
26.	Kodagu	9705000
27.	Bangalore (U)	63664740
28.	Bangalore (R)	6795000
	Total	375740673

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯನ್ನು ಸರಿಯಾಗಿ ಇಲಾಖೆಯ ಅಧಿಕಾರಿಗಳು ಅರ್ಥವನ್ನೇ ಮಾಡಿಕೊಂಡಿಲ್ಲ ಮತ್ತು ಇದಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಈ ಅಧಿಕಾರಿಗಳು ಬಹಳಷ್ಟು ಜನರು ಹೇಗಿದ್ದಾರೆ ಎಂದರೆ ಪ್ರಶ್ನೆಗಳಿಗೆ ಉತ್ತರ ಸರಿಯಾಗಿ ಸಿಗದ ಹಾಗೆ ತಾಂತ್ರಿಕವಾದಂಥ ಉತ್ತರವನ್ನು ಕೊಡುತ್ತಾರೆ. ನಾನು ಇಲ್ಲಿ ತಾಂತ್ರಿಕವಾದ ಉತ್ತರವನ್ನು ಕೇಳುತ್ತಿಲ್ಲ. ಸಮರ್ಪಕವಾದ ಉತ್ತರವನ್ನು ನಾನು ಇಲ್ಲಿ ಕೇಳುತ್ತಿದ್ದೇನೆ. ನಾನು ಪ್ರಶ್ನೆಯಲ್ಲಿ ಸ್ಪಷ್ಟವಾಗಿ ಕೇಳಿರುವುದೇನೆಂದರೆ ಈ ರಾಜ್ಯದಲ್ಲಿರುವಂಥ ಡಿಸ್ಟ್ರಿಕ್ಟ್ ಹಾಸ್ಪಿಟಲ್, ತಾಲ್ಲೂಕು ಹಾಸ್ಪಿಟಲ್, ಕಮ್ಯುನಿಟಿ ಹೆಲ್ತ್ ಸೆಂಟರ್, ಪ್ರೈಮರಿ ಹೆಲ್ತ್ ಸೆಂಟರ್‌ಗಳಿಗೆ ಎಷ್ಟು ಪ್ರಮಾಣದಲ್ಲಿ ನೀವು ಔಷಧಿಗಳನ್ನು ಖರೀದಿ ಮಾಡುತ್ತೀರಿ ಎಂದು ಕೇಳಿದರೆ ಅದಕ್ಕೆ ಇವರು ಉತ್ತರ ಏನು ಕೊಟ್ಟಿದ್ದಾರೆಂದರೆ ಜನರಲ್ ಆಗಿ ಉತ್ತರಿಸುತ್ತಾ ಜಿಲ್ಲಾ ಪರಿಷತ್‌ನಲ್ಲಿ 60 ಪರ್ಸೆಂಟ್ ಮಾಡುತ್ತೇವೆ, ನಾವು ಡೈರಕ್ಟ್ ಆಗಿ 40 ಪರ್ಸೆಂಟ್ ಕೊಡುತ್ತೇವೆ ಎಂದಿದ್ದಾರೆ. ಈ ರೀತಿಯ ಉತ್ತರ ಸರಿಯಾದುದಲ್ಲ. ಆದುದರಿಂದ ನೀವು ದಯಮಾಡಿ ಯಾವ ಯಾವ ಸಂಸ್ಥೆಗಳಿಗೆ ಎಷ್ಟು ಪ್ರಮಾಣದಲ್ಲಿ ಔಷಧಗಳನ್ನು ಖರೀದಿ ಮಾಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಇದರ ಜೊತೆ ನಾನು ಇನ್ನೂ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಈ ಔಷಧಗಳನ್ನು ಖರೀದಿ ಮಾಡುವುದಕ್ಕೆ ಯಾವ ಮಾನದಂಡ ಇದೆ ಮತ್ತು ಯಾವ ಯಾವ ಸಂಸ್ಥೆಗಳಿಂದ ಖರೀದಿ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದರೆ ಉತ್ತರದಲ್ಲಿ ಮಾನದಂಡವನ್ನು ನಿಗಧಿಪಡಿಸಿದ್ದೇವೆ ಎಂದಿದ್ದಾರೆ. ಆದರೆ ಅದು ಯಾವ ಮಾನದಂಡ ಇಲಾಖೆ ನಿಗಧಿಪಡಿಸಿರುವುದು ಎಂಬುದನ್ನು ಹೇಳಿಯೇ ಇಲ್ಲ. ನಮಗೆ ಗೊತ್ತಾಗಬೇಡವೆ ಅದು ಯಾವ ಮಾನದಂಡ ಎಂದು ?. ಯಾರು ಯಾರಿಂದ ಔಷಧಗಳನ್ನು ಖರೀದಿ ಮಾಡುತ್ತೀರಿ ಎಂಬ ಬಗ್ಗೆ ವಿವರಗಳನ್ನು ಕೊಡಿ ಎಂದು ಕೇಳಿದರೆ ವಿವರಗಳನ್ನು ಕೊಡಲೇ ಇಲ್ಲ. ಅವರ ಹೆಸರುಗಳನ್ನು ಹೇಳುವುದಕ್ಕೇ ಇವರು ತಯಾರಿಲ್ಲ. ಇನ್ನು ಬಹಳಷ್ಟು ಕಡೆ ಡೂಪ್ಲಿಕೇಟ್ ಮೆಡಿಸನ್‌ಗಳನ್ನು ಸಪ್ಲೈ ಮಾಡುತ್ತಾರೆ. ಇದು ಬಹಳ ಗಂಭೀರವಾದ ವಿಚಾರ. ಇದು ಕೇವಲ ಕರ್ನಾಟಕದಲ್ಲಷ್ಟೇ ಅಲ್ಲ. ನಮ್ಮ ದೇಶದಲ್ಲಿ ಉತ್ಪಾದನೆಯಾಗುವಂಥ ಔಷಧಗಳಲ್ಲಿ ನೂರಕ್ಕೆ ಎಪ್ಪತ್ತು ಪರ್ಸೆಂಟ್ ಔಷಧಗಳು ಕಳಪೆ ಮಟ್ಟದಲ್ಲಿವೆ. ಕಳಪೆ ಮಟ್ಟದ್ದು ಮತ್ತು ಡೂಪ್ಲಿಕೇಟ್. ನಮ್ಮ ಪಿ.ಹೆಚ್.ಸಿ. ಮತ್ತು ಹಾಸ್ಪಿಟಲ್‌ಗಳಲ್ಲಿ ಏನು ಔಷಧವನ್ನು ಖರೀದಿ ಮಾಡುತ್ತಾರೋ ಅಲ್ಲಿ ಎರಡು ರೀತಿಯ ವ್ಯವಹಾರಗಳು ನಡೆಯುತ್ತಿವೆ. ಇವರು ಜನರಿಗೆ ಬೇಕಾಗುವಂಥ ಔಷಧಗಳನ್ನು ಇವರು

ಖರೀದಿ ಮಾಡುವುದೇ ಇಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದುದರಿಂದ ನಾನೇನು ಈಗ ಪ್ರಶ್ನೆಗಳನ್ನು ಹೇಳಿದ್ದೇನೆ ಅದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಬಯಸುತ್ತೇನೆ.

ಶ್ರೀ ಎನ್. ಜೆಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತರ ಸರಿ ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ ಇರತಕ್ಕಂಥ ವ್ಯವಸ್ಥೆಯಲ್ಲಿ ನಾವು ಸ್ಟೇಟ್ ಸೆಕ್ಟ್ರ್ಸ್, ಡಿಸ್ಟ್ರಿಕ್ಟ್ ಸೆಕ್ಟ್ರ್ಸ್‌ನಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ತಾಲ್ಲೂಕು ಆಸ್ಪತ್ರೆಗಳು ಮತ್ತು ಪಿ.ಹೆಚ್.ಸಿ.ಗಳು, ಸಿ.ಹೆಚ್.ಸಿ.ಗಳು ಬರುವುದರಿಂದ 60 ಪರ್ಸೆಂಟು ಟೋಟಲಿ ಅವರಿಗೆ ಕೊಟ್ಟು 40 ಪರ್ಸೆಂಟ್ ಕೊಡುತ್ತೇವೆ ಎಂದು. ತಾಲ್ಲೂಕು ಆಸ್ಪತ್ರೆಗೆ 3 ಲಕ್ಷ ರೂ. ಗಳ ಮೆಡಿಸನ್ ಒದಗಿಸತಕ್ಕಂಥ ವ್ಯವಸ್ಥೆಯನ್ನು ನಾವು ಇಟ್ಟುಕೊಂಡಿದ್ದೇವೆ. ಅದರಲ್ಲಿ 60 ಪರ್ಸೆಂಟ್ ಜಿಲ್ಲಾ ಪಂಚಾಯತಿಯಿಂದ ಕೊಡುತ್ತಾರೆ. 40 ಪರ್ಸೆಂಟ್ ನಾವು ನೇರವಾಗಿ ಇಲ್ಲಿಂದ ಕೊಡುತ್ತಿದ್ದೇವೆ. ಡಿಸ್ಟ್ರಿಕ್ಟ್ ಹಾಸ್ಪಿಟಲಿಗೆ 8 ರಿಂದ 10 ಲಕ್ಷ ರೂ.ಗಳ ಮೆಡಿಸನ್‌ಗಳನ್ನು ಕೊಡುತ್ತೇವೆ. ಅದಕ್ಕಿಂತ ಹೆಚ್ಚು ಬೇಡಿಕೆ ಇದ್ದರೆ ಅದಕ್ಕೆ ಇಂಡೆಂಟ್ ಬಂದರೆ ಅದನ್ನೂ ಕೂಡ ನಾವು ಒದಗಿಸುತ್ತೇವೆ. ಮೆಡಿಸನ್‌ಗಳನ್ನು ನೀವು ಕಟ್ಟುನಿಟ್ಟಾಗಿ ಇಷ್ಟೇ ಪ್ರಮಾಣದಲ್ಲಿ ಉಪಯೋಗಿಸಬೇಕು ಎಂದೂ, ಇದಕ್ಕಿಂತ ಹೆಚ್ಚು ಜಾಸ್ತಿ ಬೇಕಾದರೆ ನಾವು ಮೆಡಿಸನ್‌ಗಳನ್ನು ಕೊಡುವುದಿಲ್ಲವೆಂದು ಯಾವ ಆಸ್ಪತ್ರೆಗಳಿಗೂ ನಾವು ಹೇಳಿಲ್ಲ. 20 ಪರ್ಸೆಂಟ್ ಅನುದಾನವನ್ನು ಡಿಸ್ಟ್ರಿಕ್ಟ್ ಆಸ್ಪತ್ರೆಗಳಿಗೆ ಕೊಡುತ್ತೇವೆ. ನಾವು ಕೊಡತಕ್ಕಂಥ ಮೆಡಿಸನ್ ಒಂದು ವೇಳೆ ಶಾರ್ಟೇಜ್ ಆದರೆ ಅವರೇ ತಕ್ಷಣ ಔಷಧವನ್ನು ಪರ್ಚೇಸ್ ಮಾಡುವುದಕ್ಕೆ ಅವರಿಗೆ ಅವಕಾಶವಿದೆ; ಅಥವಾ ನಾವು ಕೊಡುತಕ್ಕಂಥ ಮೆಡಿಸನ್ ಬಿಟ್ಟು ಬೇರೆ ಯಾವುದಾದರೂ ಹೈಯರ್ ಅಂಟಿಬಯಾಟಿಕ್ ಅಥವಾ ಬೇರೆ ಯಾವುದನ್ನಾದರೂ ಡಾಕ್ಟರ್ ಸಜೆಸ್ಟ್ ಮಾಡಿದರೆ ಆ ಔಷಧಗಳನ್ನು ಅವರು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಲಾಗಿದೆ. ತಾಲ್ಲೂಕು ಆಸ್ಪತ್ರೆಯಲ್ಲೂ ಕೂಡ ಯೂಸರ್ಸ್ ಅಮೌಂಟ್ ಇದೆ. ಅದನ್ನು ಸಹ ಮಾಡಬಹುದು. ಇಷ್ಟು ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಈ ಬಾರಿ ಹೆಚ್ಚು ಮೆಡಿಸನ್‌ಗಳನ್ನು ತೆಗೆದುಕೊಳ್ಳಲು 10 ಕೋಟಿ ರೂಪಾಯಿಗಳನ್ನು ಬಜೆಟಿನಲ್ಲಿ ನಮ್ಮ ಉಪ ಮುಖ್ಯಮಂತ್ರಿಗಳು ಇಟ್ಟು ಅವಕಾಶ ಮಾಡಿಕೊಟ್ಟಿದ್ದಾರೆ. ಇನ್ನು ಕಳಪೆ ಗುಣಮಟ್ಟದ ಬಗ್ಗೆ ಮಾನ್ಯ ಸದಸ್ಯರು ಬೆಳಕು ಚೆಲ್ಲಿದ್ದಾರೆ. ಇದನ್ನು ಚೆಕ್ ಮಾಡುವ ಸಲುವಾಗಿಯೇ

ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಇದೆ. ಲ್ಯಾಬೊರೇಟರಿ ಇದೆ. ಅದರ ಬಗ್ಗೆ ಸಾಕಷ್ಟು ಲ್ಯಾಬೊರೇಟರಿಯಲ್ಲಿ ಚೆಕ್ ಮಾಡುವ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ನಿರ್ದಿಷ್ಟವಾದ ಪ್ರಕರಣಗಳ ಬಗ್ಗೆ ನಮಗೆ ತಿಳಿದಾಗ ನಾವು ಯಾವುದೇ ಅಬ್ಲಿಗೇಶನ್‌ಗೆ ಅವಕಾಶ ಕೊಡದೇ ಮುಲಾಜಿಲ್ಲದೇ ಅಂಥವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇಲಾಖೆಯ ಬಗ್ಗೆ ಮಾನ್ಯ ಸದಸ್ಯರು ಖಾಸಗಿಯಾಗಿಯೂ ಸಾಕಷ್ಟು ಭಾರಿ ನನಗೆ ಹೇಳಿದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ಇವೆಲ್ಲಾ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಇಲಾಖೆಯಲ್ಲಿ ಹೆಚ್ಚು ಗಮನವನ್ನು ಹರಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೆ, ಒಳ್ಳೆಯ ಗುಣಮಟ್ಟದ ಔಷಧಗಳನ್ನು ನಮ್ಮ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನವರೇ ಖರೀದಿ ಮಾಡುತ್ತಾರೆ ಎಂದು ಮಾನ್ಯ ಸಚಿವರು ಹೇಳಿದರು. ಡ್ರಗ್ ಕಂಟ್ರೋಲರ್ಸ್ ಮತ್ತು ಖರೀದಿ ಮಾಡುವವರು ಸರ್ಕಾರದವರೇ ಆಗಿದ್ದಾರೆ. They have a hand in gloves.

ಮಾನ್ಯ ಅಧ್ಯಕ್ಷರೆ, ನಾನು ಇವೊತ್ತಿಗೂ ಹೇಳುತ್ತೇನೆ, ನೂರಕ್ಕೆ ಎಂಬತ್ತರಷ್ಟು ಔಷಧಗಳು ಕಳಪೆ ಔಷಧಗಳಾಗಿವೆ. ಅವು ಎಫೆಕ್ಟ್ ಆಗುವುದೇ ಇಲ್ಲ. ಆ್ಯಂಟಿಬಯಾಟಿಕ್ ಮೆಡಿಸನ್ ಕೊಡುತ್ತಾರೆ, ಆದರೆ ಅದರಲ್ಲಿ ಏನೂ ಶಕ್ತಿಯೇ ಇರುವುದಿಲ್ಲ. ನಾನು ಹೇಳುತ್ತಿರುವುದು ಇದೇನೂ ಹೊಸದಲ್ಲ. ಈಗಾಗಲೇ ಇದರ ಬಗ್ಗೆ ಹಿಂದೆ ಹಲವಾರು ಆರೋಪಗಳು ಆಗಿವೆ. ಸಿ.ಓ.ಡಿ. ಎನ್‌ಕ್ವೈರಿಯಾಗಿದೆ, ಕೆಲವು ಕಡೆ ಸಿ.ಬಿ.ಐ ಎನ್‌ಕ್ವೈರಿ ಕೂಡ ಆಗಿದೆ. ಈಗ ಮತ್ತೆ ಪುನಃ ರಾಜ್ಯದಲ್ಲಿ ನಕಲಿ ಔಷಧಗಳು ಖರೀದಿಯಾಗುತ್ತಿದೆ. ಇದರ ಬಗ್ಗೆ ತಾವು ಗಮನವನ್ನು ಹರಿಸಬೇಕು. ಮತ್ತು 2ನೇಯದಾಗಿ ಮಾನ್ಯ ಮಂತ್ರಿಗಳು ಡ್ರಗ್ ಕಂಟ್ರೋಲರ್ ಇದ್ದಾರೆಂದು ಹೇಳುತ್ತಿದ್ದಾರಲ್ಲ, ಅವರು ಬೇಡ. ಬೇರೆ ಇಂಡಿಪೆಂಡೆಂಟ್ ಬಾಡಿಯನ್ನು ತಾವು ಕಾಸ್ಟ್ರಿಬ್ಯೂಟ್ ಮಾಡಿ, ಇದು ನಿಜವಾದ ಔಷಧಿ ಹೌದೋ ಅಲ್ಲವೋ ಎನ್ನುವುದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗಿದೆ. ಆದುದರಿಂದ ತಾವು ದಯವಿಟ್ಟು ಡ್ರಗ್ ಕಂಟ್ರೋಲರ್ ಬಿಟ್ಟು ಬೇರೆಯವರನ್ನು ಇದಕ್ಕೆ ಕಾಸ್ಟ್ರಿಬ್ಯೂಟ್ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾನು ಎರಡು ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಒಂದು ಪ್ಯಾರಸಿಟಮಲ್ ಹೆಚ್ಚು ಸಪ್ಲೈ ಇಲ್ಲ. ಇನ್‌ಪೆಕ್ಷನ್‌ಗೆ ಯಾವುದೇ ಆಸ್ಪತ್ರೆಯಲ್ಲಿ ಅಗತ್ಯವಾಗಿ ಕೊಡಬೇಕಾದ ಔಷಧಿ, ಯಾವುದೇ ಆಸ್ಪತ್ರೆಯಲ್ಲಿ

ತಾವು ಪ್ಯಾರಸಿಟಮಲ್ ಡ್ರಗ್ ಅನ್ನು ಇವತ್ತು ಸಪ್ಲೈ ಮಾಡಿಲ್ಲ. ಎರಡನೆಯದಾಗಿ ತಾವು ಷೆಡ್ಯುಲ್ ಡ್ರಗ್ಸ್ ಅನ್ನು ಕೊಡುವ ಕಡೆ ಮೆಡಿಕಲ್ ಸ್ಟೋರ್ಸ್ ಅಥವಾ ಆಸ್ಪತ್ರೆ ಆಗಲಿ ಜನರಲ್ ಡ್ರಗ್ಸ್ ಕೊಟ್ಟು ರಾಜ್ಯದ ಎಲ್ಲಾ ಮೆಡಿಕಲ್ ಸ್ಟೋರ್‌ಗಳನ್ನು ಮುಚ್ಚುವಂತಹ ಸ್ಥಿತಿಯನ್ನು ನಿರ್ಮಾಣಮಾಡಿದ್ದೀರಿ. ಅಲ್ಲಿ ಏನಾದರೂ ಫ್ರಿಸ್‌ಕ್ರೈಬ್ ಕಂಪನಿಯದು ಕೊಡುತ್ತೇವೆಂದರೆ ಇನ್ನೊಂದು ಮಾತ್ರೆ ಚೀಟಿ ಸುತ್ತಿರುವುದು ಕೊಡುತ್ತಾನೆ. ಮೂರನೆ ಒಂದು ಭಾಗದಷ್ಟು ಹಣ ಕಡಿಮೆಯಾಗುತ್ತದೆ ಷೆಡ್ಯುಲ್ ಡ್ರಗ್‌ಗೆ ಒಂದು ರೆಗ್ಯುಲರ್ ಕಂಪನಿಯವರನ್ನು ಬಿಟ್ಟು ಜನರಲ್‌ನವರು ಸಪ್ಲೈ ಮಾಡಿದರೆ. ಇನ್ನು ಮೂರನೆಯದು ನಿಮ್ಮ ಎಲ್ಲಾ ಡಾಕ್ಟರ್‌ಗಳು ಡಿಸ್‌ಪೆನ್ಸ್‌ಂಗ್‌ಸ್ಟಾರ್ಟ್ ಮಾಡಿದ್ದಾರೆ. ಅವರೇ ಮಾತ್ರೆಗಳನ್ನು ಕೊಡುತ್ತಾರೆ. ಆಚೆ ಕಡೆಯಿಂದ ತೆಗೆದುಕೊಂಡು ಬರುವುದಕ್ಕೆ ಬರೆದು ಕೊಡುವುದೆ ಇಲ್ಲ ಒಬ್ಬರಿಗೂ. ಅವರಿಗೆ ನೋಡಿದ್ದಕ್ಕೆ ದುಡ್ಡು ಕೊಡಬೇಕು, ಅವರ ಹತ್ತಿರವೆ ಮಾತ್ರೆ ತೆಗೆದುಕೊಳ್ಳಬೇಕು, ಅವರ ಹತ್ತಿರವೆ ಔಷಧಿ ತೆಗೆದುಕೊಳ್ಳಬೇಕು. ನಿಮ್ಮಲ್ಲಿ ಕೆಹೆಚ್‌ಎಸ್‌ಡಿಪಿ ಮಾಡಿದ್ದೀರಲ್ಲ, ಅಲ್ಲಿಲ್ಲ ಒಂದೊಂದು ಕಡೆ ಇಷ್ಟು ಹಣ ಕೊಡಬೇಕೆಂದು ಮಾಡಿದ್ದೀರಿ. ಆದು ಎಕ್ಸ್‌ರೆಗೆ 35, ಇಂತಿಂತಾದ್ದಕ್ಕೆ ಇಷ್ಟಷ್ಟು ಹಣ ಎಂದು ನಿಗದಿ ಮಾಡಿರುವುದನ್ನು ದುರುಪಯೋಗ ಮಾಡಿಕೊಂಡು ಹಣ ತೆಗೆದುಕೊಳ್ಳುತ್ತಾರೆ. ಒಂದು ಎಕ್ಸ್‌ರೇ 200 ರಿಂದ 300 ರೂಪಾಯಿವರೆಗೂ ಹಣ ಕೇಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಆದರೆ ಅದಕ್ಕೆ ರಸೀತಿ ಹಾಕಬೇಕಾದರೆ 35 ರೂಪಾಯಿ ಹಾಕಿಕೊಂಡು ಬಿಡುತ್ತಾರೆ. 35 ರೂಪಾಯಿಯಲ್ಲಿ ನಿಮಗೆ ಏನು ಆಗುತ್ತಿತ್ತು ಆದುದರಿಂದ ಫ್ರೀ ಆಗಿ ಎಕ್ಸ್‌ರೆ ಮಾಡುವುದಕ್ಕೆ ಒಂದು ಆದೇಶ ಕೊಡಬೇಕು. ಪರ್ಟಿಕ್ಯುಲರ್ ಆಗಿ ತಕ್ಷಣ ಪ್ಯಾರಸಿಟಮಲ್ ಸಪ್ಲೈ ಮಾಡುವುದಕ್ಕೆ ಏನಾದರೂ ಒಂದು ಕ್ರಮವನ್ನು ಜರುಗಿಸಬೇಕು. ಡಾಕ್ಟರ್ ಡಿಸ್‌ಪೆನ್ಸ್ ಮಾಡುವುದನ್ನು ತಪ್ಪಿಸಬೇಕು, ಆಚೆ ಔಷಧಿಗಳನ್ನು ತೆಗೆದುಕೊಳ್ಳಲು ಬರೆದುಕೊಡುವಂತಹ ಸ್ಥಿತಿಗೆ ವ್ಯವಸ್ಥೆಯನ್ನು ತನ್ನಿ, ಮೆಡಿಕಲ್ ಸ್ಟೋರ್‌ನವರು ಉಳಿದುಕೊಳ್ಳಲಿ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈಗಾಗಲೆ ಪ್ಯಾರಸಿಟಮಲ್ ಸಪ್ಲೈ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ಡಿಸ್ಟ್ರಿಕ್ಟ್‌ವೈಸ್ ಲಾಜಿಸ್ಟಿಕ್ ಸೊಸೈಟಿಗಳು 14 ಇವೆ, ಅಲ್ಲಿ ವಿತರಣೆಯಾಗುತ್ತಿದೆ. ಈ ವ್ಯವಸ್ಥೆಯನ್ನು ಎರಡು ಜಿಲ್ಲೆಗಳಿಗೆ ಒಂದರಂತೆ ವ್ಯವಸ್ಥೆ ಮಾಡಿದ್ದೇವೆ. ಇನ್ನು ಎಪಿಎಲ್‌ನವರಿಗೆ ಮಾತ್ರ ಎಕ್ಸ್‌ರೆಗೆ ಮತ್ತು ಬೇರೆಯದಕ್ಕೆ ಸ್ವಲ್ಪ ಜಾರ್ಜ್ ಮಾಡುತ್ತಿದ್ದೇವೆ. ಆದರೆ ಬಿಪಿಎಲ್ ನವರಿಗೆ ಮಾತ್ರ

ಜಾರ್ಜ್ ಮಾಡುವುದಿಲ್ಲ. ಮೆಡಿಸನ್‌ಗಳನ್ನು ಎಪಿಎಲ್‌ನವರಿಗೂ ಹಾಗೂ ಬಿಪಿಎಲ್‌ನವರಿಗೂ ಫ್ರೀ ಕೊಡುತ್ತೇವೆ. ಮೆಡಿಸಿನ್ ವಿಚಾರದಲ್ಲಿ ಯಾವುದೇ ವ್ಯತ್ಯಾಸ ಹಾಗೂ ತಾರತಮ್ಯವನ್ನು ಮಾಡುತ್ತಿಲ್ಲ. ಇನ್ನು ಡಾಕ್ಟರ್‌ಗಳು ಏನು ಪ್ಯಾರಲಲ್ ಆಗಿ ಕ್ಲಿನಿಕ್‌ಗಳನ್ನು ನಡೆಸುತ್ತಿದ್ದಾರೆ, ಆದರ ವಿಚಾರವಾಗಿ ನಾನು ಎರಡು ತಿಂಗಳಲ್ಲಿ ಸಾಕಷ್ಟು ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ವಿಸಿಟ್ ಮಾಡಿ ಮಾಹಿತಿಗಳೊಂದಿಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಾಡುತ್ತಿದ್ದೇವೆ. ಹಾಗೂ ಈ ಇಲಾಖೆಯಲ್ಲಿ ಕಟ್ಟುನಿಟ್ಟಾಗಿ ಸುಧಾರಣೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ನಮ್ಮ ಮಾನ್ಯ ಸದಸ್ಯರು ಹೇಳಿದ ಹಾಗೆ ಡ್ರಗ್ ಕಂಟ್ರೋಲರ್ ನವರು ಕ್ವಾಲಿಫೈಡ್ ಇರಬೇಕಾಗುತ್ತದೆ. ಆದರೆ ಅದಕ್ಕೆ ಬೇರೆಯವರನ್ನು ಪ್ಯಾರಲಲ್ ಆಗಿ ನೇಮಕ ಮಾಡುವುದು ಅಷ್ಟು ಸರಿಯಲ್ಲ. ಏಕೆಂದರೆ ಡ್ರಗ್ ಕಂಟ್ರೋಲರ್‌ನವರಿಗೆ ಇಲಾಖೆಯಲ್ಲಿ ಸಂಬಳ ಕೊಟ್ಟು ಎಲ್ಲಾ ವ್ಯವಸ್ಥೆ ಕೊಟ್ಟು, ಅವರಿಗೆ ಟಿಎ:ಡಿಎ ಕೊಟ್ಟು ಅವರನ್ನು ಬಿಟ್ಟು, ನೀವು ಆರಾಮಾಗಿ ಕುಳಿತುಕೊಂಡಿರಿ ಎಂದು ಹೇಳಿ ನಾವು ಬೇರೆಯವರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆಯೇ? ಆದರೆ ಡ್ರಗ್ ಕಂಟ್ರೋಲರ್‌ನವರು ಸರಿಯಾಗಿ ಕೆಲಸ ಮಾಡದೆ ಇದ್ದರೆ, ಅವರು ಸರಿಯಾಗಿ ಕೆಲಸ ಮಾಡತಕ್ಕಂಥ ರೀತಿಯಲ್ಲಿ ಮಾಡಿಸುತ್ತೇವೆ.

ಶ್ರೀ ಬಸವರಾಜ್ ರಾಯರೆಡ್ಡಿ :– ಆ ಡ್ರಗ್ ಕಂಟ್ರೋಲರ್ ಯಾರು ? ಅವರು ನಮ್ಮ ಸರ್ಕಾರದವರೆ. ಖರೀದಿ ಮಾಡುವವರು ನಮ್ಮ ಸರ್ಕಾರದವರೆ. ಇಲ್ಲಿ ಬೇಲಿ ಎದ್ದು ಹೊಲ ಮೇಯುತ್ತಿದೆ ಅಷ್ಟೆ.

ಶ್ರೀ ಎನ್. ಚೆಲುವರಾಯಸ್ವಾಮಿ :– ಎಲ್ಲರೂ ಒಂದಲ್ಲ ಒಂದು ರೀತಿಯಿಂದ ಅವರವರ ಜವಾಬ್ದಾರಿಯನ್ನು ಅರಿತು ಕೆಲಸವನ್ನು ಮಾಡದೆ ಇದ್ದರೆ, ಪ್ರತಿಯೊಬ್ಬರು ಮಂತ್ರಿಗೂ ಪ್ಯಾರಲಲ್ ಆಗಿ ಇನ್ನೊಬ್ಬರು ಮಂತ್ರಿ, ಒಬ್ಬರು ಸೆಕ್ರೆಟರಿಗೆ ಇನ್ನೊಬ್ಬರು ಸೆಕ್ರೆಟರಿ ಪ್ಯಾರಲಲ್ ಆಗಿ ಇರುವುದಕ್ಕೆ ಕಷ್ಟವಾಗುತ್ತದೆ. ಈಗ ನಾವು ಆ ಡ್ರಗ್ಸ ಕಂಟ್ರೋಲರ್ ಮುಚ್ಚಬೇಕಾಗುತ್ತದೆ. ಈಗ ನಾವು ಅವರ ಮೇಲೆ ಅನುಮಾನ ಪಡುವುದಾದರೆ ಅದನ್ನು ಮುಚ್ಚಿಬಿಟ್ಟು ಹೊಸದಾಗಿ ಪ್ಯಾರಲಲ್ ಆಗಿ ಮಾಡಬೇಕಾದರೆ ಇನ್ನೊಂದು ತಂತ್ರವನ್ನು ಹುಡುಕಬೇಕಾಗುತ್ತದೆ. ಆದುದರಿಂದ ನಾವು ಅವರಿಗೆ ಸಂಪೂರ್ಣವಾದಂತಹ ಜವಾಬ್ದಾರಿಯನ್ನು ಕೊಟ್ಟಿದ್ದೇವೆ, ಅವರು ಆ ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸದೆ ಇದ್ದಾಗ, ಆ ಇಲಾಖೆಯನ್ನು ಸರಿಪಡಿಸತಕ್ಕಂಥ ಕೆಲಸವನ್ನು ತಾವು ಮಾಡುತ್ತೇವೆ. ಇನ್ನು

ನಿರ್ದಿಷ್ಟವಾಗಿ ಕಳಪೆ ಔಷಧಗಳ ಬಗ್ಗೆ ಮಾಹಿತಿ ಕೊಟ್ಟರೆ ಅದರ ಬಗ್ಗೆ ನಾನು ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ನಮ್ಮದು ಯಾವುದೇ ರೀತಿಯ ಉದಾಸೀನ ಇಲ್ಲ. ಕಳಪೆ ಔಷಧದ ಬಗ್ಗೆ ತಮ್ಮ ತಾಲ್ಲೂಕಿನಲ್ಲೆ ಅಥವಾ ಕ್ಷೇತ್ರದಲ್ಲೆ ನಿರ್ದಿಷ್ಟವಾಗಿ ಎಲ್ಲಿ ವಿತರಣೆಯಾಗುತ್ತಿದೆಯೆಂದರೆ ಅದರ ಮಾಹಿತಿ ಕೊಡಿ.

ಒಬ್ಬರು ಮಾನ್ಯ ಸದಸ್ಯರು :- ಲಿಮಿಟೆಡ್ ಕಂಪನಿಯಿಂದ ಪರ್ಚೇಸ್ ಮಾಡುವುದಕ್ಕೆ ಹೇಳಿ.

ಶ್ರೀ ಜೆ. ಸಿ. ಮಾಧುಸ್ವಾಮಿ :- ಈಗ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಆಸಿಸ್ಟೆಂಟ್ ಕಮಿಷನರ್ ಅಥವಾ ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿ ಎಂಎಲ್‌ಎಗಳು ಒಳಗೆ ಹೋಗದೆ ಇರುವಂತಹ ಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ಏನು ಆಸ್ಪತ್ರೆಯಲ್ಲಿ ಅಡ್ವೈಸರಿ ಕಮಿಟಿ ಆಗಿತ್ತು, ಶಾಸಕರ ಅಧ್ಯಕ್ಷತೆಯಲ್ಲಿ ಇದ್ದದ್ದನ್ನು ತೆಗೆದುಬಿಟ್ಟು ಎ.ಸಿ.ಯವರನ್ನು ಇಟ್ಟರು; ಈಗ ಎ.ಸಿ. ಯವರನ್ನು ತೆಗೆದುಬಿಟ್ಟು ಈಗ ಟಿ.ಪಿ.ಎಸ್ ಅಧ್ಯಕ್ಷರನ್ನು ಇಟ್ಟಿದ್ದೀರಿ. ಅಲ್ಲಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರನ್ನು ಇಟ್ಟು, ಅವರು ಆ ಆಸ್ಪತ್ರೆಯನ್ನು ಮಾನಿಟರ್ ಮಾಡುತ್ತಾರಲ್ಲ, ನಾವು ಒಳಗಡೆ ಹೋಗದ ಹಾಗೆ ಮಾಡಿಬಿಟ್ಟಿದ್ದಾರೆ. ತಾತ್ವಿಕವಾಗಿ ಎಂಎಲ್‌ಎಗಳಿಗೆ ಏನೇನು ಮಾಡಬಾರದು ಎಲ್ಲಾ ಆಗಿಬಿಟ್ಟಿದೆ. ಅದಕ್ಕೆ ಈಗಲಾದರೂ ತಾವು ಬದಲಾವಣೆ ಮಾಡಿ, ಅಲ್ಲಿರುವಂತಹ ಅಡ್ವೈಸರಿ ಕಮಿಟಿ ಏನಿದೆ, ಅದನ್ನು ಶಾಸಕರ ಅಧ್ಯಕ್ಷತೆಯಲ್ಲಿ ಮಾಡಿ.

ಅಧ್ಯಕ್ಷರು:- ಈಗ ನೀವೇನಾದರೂ ಒಳಗಡೆ ಹೋದರೆ ಅಲ್ಲಿ ಏನಾದರೂ ಹೆಚ್ಚು ಕಡಿಮೆ ಆಗುತ್ತದಾ?

ಶ್ರೀ ಜೆ.ಸಿ. ಮಾಧುಸ್ವಾಮಿ:- ಅಲ್ಲಿರುವಂತಹ ಡಾಕ್ಟರ್ ಒಬ್ಬ ಎಂಎಲ್‌ಗೆ ಹೆದರಿದ ಹಾಗೆ ನಿಮ್ಮ ಟಿ.ಪಿ. ಅಧ್ಯಕ್ಷರಿಗೆ ಹೆದರುತ್ತಾರ?

ಅಧ್ಯಕ್ಷರು:- ಈಗ ಮಾಧುಸ್ವಾಮಿಯವರೆ, ಎಲ್ಲರೂ ಜನಪ್ರತಿನಿಧಿಗಳು, ಅದು ತಾಲ್ಲೂಕು ಪಂಚಾಯತ್ ಆಗಬಹುದು, ಅಸೆಂಬ್ಲಿ ಆಗಬಹುದು ಎಲ್ಲರೂ ಆತ್ಮಶೋಧನೆ ಮಾಡಿಕೊಳ್ಳಬೇಕು. ಆತ್ಮಶೋಧನೆ ಮಾಡಿಕೊಂಡು ಎಲ್ಲರೂ ಅವರವರ ಕರ್ತವ್ಯವನ್ನು ಅಧಿಕಾರಿಗಳು, ಜನಪ್ರತಿನಿಧಿಗಳು ಎಲ್ಲರೂ ಸರಿಯಾಗಿ ನಡೆದರೆ ಹ್ಯಾಂಡ್ ಇಲ್ಲ ಗ್ಲೌಸು ಇಲ್ಲ. ಅದಕ್ಕೆ ಎಲ್ಲರೂ ಜವಾಬ್ದಾರರು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಔಷಧಿಗಳನ್ನು ಸರಬರಾಜು ಮಾಡುವಾಗ, ಅದರಲ್ಲಿ ಕೆಲವು ಪ್ರಾಮುಖ್ಯವಾದಂತಹ ಔಷಧಗಳು ಇಲ್ಲ ಹಾಗೂ ಮಾನ್ಯ ರಾಯರೆಡ್ಡಿಯವರು ಹೇಳಿದ ಹಾಗೆ ಔಷಧಗಳಲ್ಲಿ ಗುಣಮಟ್ಟ ಇಲ್ಲ ಎಂದು ತಿಳಿಸಿದರು. ಇನ್ನು ಎರಡನೆಯದಾಗಿ ಇದರ ಬಗ್ಗೆ ಲೋಕಾಯುಕ್ತದವರು ಕೂಡ ಅನೇಕ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದರು, ಅವರು ದಾಳಿ ಮಾಡಿ ಅನೇಕರನ್ನು ನೇರವಾಗಿ ಗುರುತಿಸಿದ್ದಾರೆ ಹಾಗೂ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ ಎಂದು ಹೇಳಿದಾಗಲೂ ಕೂಡ, ಇದರಲ್ಲಿ ಯಾರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದು ಒಂದು ಪ್ರಶ್ನೆ.

ಅಧ್ಯಕ್ಷರು:– ಆ ವಿಚಾರ ಈ ಪ್ರಶ್ನೆಯಲ್ಲಿ ಇದೆಯಾ ? ನೀವು ಏನೇ ಪ್ರಶ್ನೆ ಕೇಳಿದರೂ ಅವರು ಹೇಗೆ ಅದಕ್ಕೆ ಉತ್ತರ ಹೇಳುತ್ತಾರೆ?

ಶ್ರೀ ವಾಟಾಳ್ ನಾಗರಾಜ್:– ಇನ್ನು ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿದರೆ, ಚೇಳು ಕಡಿದರೆ, ಕೋತಿ ಕಡಿದರೆ, ಕುದುರೆ ಕಡಿದರೆ, ಇದೆಲ್ಲಾ ನಗುವಂತಹ ವಿಚಾರ ಅಲ್ಲ, ಕತ್ತೆ ಕಡಿದರೆ ಔಷಧಿ ಎಲ್ಲಿಟ್ಟಿದ್ದೀರಿ? ಇದು ಬಹಳ ಪ್ರಾಮುಖ್ಯವಾದದ್ದು. ಹಾಸ್ಯ ಇರಬಹುದು, ನಗು ಇರಬಹುದು. ಚೇಳು ಕಡಿದರೆ ಔಷಧಿ ಇಲ್ಲ, ಹಾವು ಕಡಿದರೆ ಔಷಧಿ ಇಲ್ಲ. ಕುದುರೆ ಕಡಿದರೆ ಔಷಧಿ ಇಲ್ಲ, ನಾಯಿ ಕಡಿದರೆ ಔಷಧಿ ಇಲ್ಲ, ಎಲ್ಲಿಟ್ಟಿದ್ದೀರಿ? ಅದರ ಜೊತೆಗೆ ಜೀವರಕ್ಷಕ ಔಷಧಿ ಎಂದು ಒಂದು ಇದೆ. ಹೃದಯಾಘಾತ ಆದತಕ್ಷಣ ಕೊಡತಕ್ಕಂಥ ಔಷಧಿ, ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ? ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿದರೆ, ಚೇಳು ಕಡಿದರೆ, ಕುದುರೆ ಕಡಿದರೆ, ಕತ್ತೆ ಕಡಿದರೆ, ಹಂದಿ ಕಡಿದರೆ ಇದಕ್ಕೆ ಔಷಧಿ ಇದೆಯಾ ?

ಅಧ್ಯಕ್ಷರು:– ಏನಿದು, ವಾಟಾಳ್ ನಾಗರಾಜ್‌ರವರೆ ನೀವು ಕತೆ ಹೇಳುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ ?

ಶ್ರೀ ಬಸವರಾಜ್ ರಾಯರೆಡ್ಡಿ:– ಕತ್ತೆ ಕಡಿಯುವುದಿಲ್ಲ, ಕತ್ತೆ ಒದೆಯುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈಗ ಬಹಳ ಪ್ರಮುಖವಾದಂತಹ ವಿಚಾರ

ಚರ್ಚೆಯಾಗುತ್ತಿದೆ. ಒಂದು ಕಳಪೆ ಔಷಧಿ ಸರಬರಾಜು. ಆಡಳಿತ ಪಕ್ಷದ ಜವಾಬ್ದಾರಿಯಿಂದ ಆ ಪ್ರಶ್ನೆಯನ್ನು ಕೊಟ್ಟಿರುವುದು. ಇನ್ನು ಎರಡನೆಯದಾಗಿ ಮೈಸೂರಿನಲ್ಲಿ ನೀವು ಸರಬರಾಜು ಮಾಡಿದಂತಹ ಔಷಧಿಯನ್ನು ಮಾರಾಟ ಮಾಡಿದಾಗ ಹಿಡಿದಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿದರಾ? ಯಾರಾದರೂ ಜೈಲಿಗೆ ಹೋದರ? ಎಲ್ಲಿಲ್ಲಿ ಈ ರೀತಿಯಾಗಿ ಔಷಧವನ್ನು ಸಪ್ಲೈ ಮಾಡಿದೆ, ಅದು ಮಾರಾಟ ಆಗುತ್ತಿದೆ. ಆದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಅಧ್ಯಕ್ಷರು:– ರೋಷನ್ ಬೇಗ್‌ರವರ ಪ್ರಶ್ನೆ ಕೇಳಿ, ಮಾನ್ಯ ಸಚಿವರೆ ರೋಷನ್ ಬೇಗ್ ಪ್ರಶ್ನೆ ಕೇಳುತ್ತಾರೆ ಅದಕ್ಕೂ ಉತ್ತರ ಹೇಳಿಬಿಡಿ.

ಶ್ರೀ ಆರ್. ರೋಷನ್ ಬೇಗ್:– ಮಾನ್ಯ ಅಧ್ಯಕ್ಷರೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಇವತ್ತು ಕೆಮಿಸ್ಟ್ ಆಂಡ್ ಡ್ರಗಿಸ್ಟ್ ಎಂದೇಳಿ ಲೂಟಿಯಾಗುತ್ತಿದೆಯಲ್ಲ, ಪ್ರತಿಯೊಂದು ಬೀದಿ ಬೀದಿಯಲ್ಲಿ ಒಂದು ಕೆಮಿಸ್ಟ್ ಅಂಗಡಿ ಇದೆ. ಒಂದು ಮೆಡಿಸಿನ್ 18 ಪೈಸೆ ಕಾಸ್ಟ್ ಇರುವುದನ್ನು 3 ರೂಪಾಯಿಗೆ ಮಾರುತ್ತಿದ್ದಾರೆ. 3 ರೂಪಾಯಿ ಕಾಸ್ಟ ಆಫ್ ಮೆಡಿಸನ್ ಇರುವುದನ್ನು 300ಗೆ ರೂಪಾಯಿ ಮಾರುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಡ್ರಗ್ ಪಾಲಿಸಿಯನ್ನು ಗೌವರ್ನ್‌ಮೆಂಟ್ ಆಫ್ ಇಂಡಿಯಾದವರು ಮಾಡುತ್ತಾರೆ, ಅದಕ್ಕೆ ನಮ್ಮ ಕರ್ನಾಟಕ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ಇದಕ್ಕೆ ಏನಾದರೂ ಒಂದು ಕೊನೆಯಾಗಬೇಕು. ಯಾರೂ ಕೇಳುವವರಿಲ್ಲ, ಮೆಡಿಸನ್ ಬೇಕೆಂದು ಹೋದರೆ ಆರ್ಜೆಂಟ್ ಬಡವರಿಗೆ ಸಿಗಬೇಕು. ಮೂರು ರೂಪಾಯಿ ಕಾಸ್ಟ್ ಇರುವುದನ್ನು 300 ರೂಪಾಯಿಗೆ ಮಾರುತ್ತಿದ್ದಾರೆ. ಈ ರೀತಿ ಲೂಟಿ ಮಾಡುತ್ತಿದ್ದಾರಲ್ಲ, ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂತಹ ವಾಟಾಳ್ ನಾಗರಾಜ್‌ರವರು ಹೇಳಿದಂತಹ ಪ್ರಶ್ನೆಗೆ ಹಾವು ಕಡಿದರೆ ಹಾಗೂ ನಾಯಿ ಕಡಿದರೆ ಅದಕ್ಕೆ ಔಷಧವನ್ನ ಸಪ್ಲೈ ಮಾಡುತ್ತಿದ್ದೇವೆ. ಎಲ್ಲಿ ಔಷಧ ಇಲ್ಲವೆಂದು ನಿರ್ದಿಷ್ಟವಾಗಿ ಹೇಳಿದರೆ ಅಲ್ಲಿಗೆ ತಕ್ಷಣ ಕಳುಹಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಬಹುಶಃ ಅಲ್ಲಿ ಏಕೆ ಸಪ್ಲೈ ಆಗಿಲ್ಲ ಎನ್ನುವುದರ ಬಗ್ಗೆ ನಾನು ಸೂಕ್ತ ಕ್ರಮ

ತೆಗೆದುಕೊಳ್ಳುತ್ತೇನೆ.

ಈಗ ಆ್ಯಂಟಿ ರೇಬಿಸ್ ಡ್ರಗ್ಸ್ ತಯಾರು ಮಾಡುವ ಕಂಪೆನಿ ಕ್ಲೋಸ್ ಆಗಿದ್ದೆ. ಇದು ಮುಚ್ಚಿದ ಮೇಲೆ 12 ಕೋಟಿ ರೂಪಾಯಿಗಳ ಡ್ರಗ್ಸ್ ಪರ್ಚೆಸ್ ಮಾಡಿದ್ದೇವೆ. ಈಗ ಮತ್ತೆ 6 ಕೋಟಿ ರೂಪಾಯಿಗಳ ಡ್ರಗ್ಸ್ ಪರ್ಚೇಸ್ ಮಾಡಲು ಫೈನಾನ್ಸ್ ಡಿಪಾರ್ಟ್‌ಮೆಂಟ್ ಅನುಮತಿಯನ್ನು ಕೊಟ್ಟಿದೆ, ಆ್ಯಂಟಿ ಸ್ನೇಕ್ ಡ್ರಗ್ಸ್ ಸಪ್ಲೈ ಇದೆ. ಅದರಲ್ಲಿ ಸಾರ್ಟೆಜ್ ಆಗುವ ಪ್ರಶ್ನೆಯೇ ಇಲ್ಲ. ಇನ್ನು ಹೆಚ್ಚಿಗೆ ಸಪ್ಲೈ ಮಾಡುವುದಕ್ಕೆ ಎಲ್ಲಿ ಅವಶ್ಯಕತೆ ಇದೆ, ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಡಿ.ಹೆಚ್.ಓ. ಗಳಿಂದ ರಿಪೋರ್ಟ್ ತರಿಸಿ, ಎಲ್ಲಾದರೂ ಶಾರ್ಟೆಜ್ ಇದ್ದರೆ, ಅದನ್ನು ಹೆಚ್ಚಿಗೆ ಕೊಡುವ ಪ್ರಯತ್ನವನ್ನು ಮಾಡುತ್ತೇನೆ. ಈಗ ಹೊಸದಾಗಿ ಕುದುರೆಗಳ ಬಗ್ಗೆ, ಇವು ಕಚ್ಚುವುದಿಲ್ಲವೆಂದು ಅಂದುಕೊಂಡಿದ್ದೇನೆ. ಈ ಕುದುರೆಗಳು ಕಚ್ಚುವುದಾದರೆ ಅದಕ್ಕೂ ಚೆಕ್ ಮಾಡಿಸಿ ನಾವು ಡ್ರಗ್ಸ್ ಸಪ್ಲೈ ಮಾಡುವುದಕ್ಕೆ ನೋಡುತ್ತೇವೆ. ನಾವು ಯಾವುದರ ಬಗ್ಗೆಯೂ ಉದಾಸೀನ ಮಾಡುವುದಿಲ್ಲ.

ಶ್ರೀ ಅರಗಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೇ, ಸಮಿಶ್ರ ಸರ್ಕಾರ ಬಂದಮೇಲೆ ಕತ್ತೆಗಳು ಒದೆದನ್ನು ಬಿಟ್ಟು, ಕಚ್ಚುವುದಕ್ಕೆ ಶುರು ಮಾಡಿದ್ದಾವಾ .....

ಶ್ರೀ ಎನ್. ಚಲುವರಾಯ ಸ್ವಾಮಿ:– ಮಾನ್ಯ ಸದಸ್ಯರು, ಯಾವುದೇ ಪ್ರಶ್ನೆಗಳನ್ನು ಕೇಳಿದರೂ, ಅದರ ಬಗ್ಗೆ ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳುತ್ತೇವೆ, ಮತ್ತೆ ಸೀರಿಯಸ್ ಆಗಿ ಗಮನ ಹರಿಸುತ್ತೇವೆ. ಇನ್ನು ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಪ್ರಸ್ತಾಪ ಮಾಡುವಂತಹ ಮೈಸೂರಿನಲ್ಲಿ ಆದಂತಹ....

ಶ್ರೀ ವಾಟಾಳ್ ನಾಗರಾಜ್:– ಇದು ಹಾಸ್ಯ ಮಾಡುವಂಥದ್ದು ಆಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ:– ನಾನು ಇದನ್ನು ಹಾಸ್ಯವಾಗಿ ತೆಗೆದುಕೊಳ್ಳುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ನಗು ಬರಬಹುದು, ಕತ್ತೆ ಕಚ್ಚುವುದಿಲ್ಲವೇ?

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ಇನ್ನು ಅನೇಕ ಸದಸ್ಯರು ಕೇಳುತ್ತಾರೆ. ಬೇರೆ ಸದಸ್ಯರು ಕೇಳುತ್ತಾರೆ, ಮಾನ್ಯ ಮಂತ್ರಿಯವರು ಉತ್ತರ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಯಡಿಯೂರಪ್ಪನವರೇ, ಕತ್ತೆ ಕಚ್ಚುವುದಿಲ್ಲವಾ? ನೀವು ಏನು ಹೀಗೆ ಮಾತನಾಡುತ್ತೀರಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಯೋಗೀಶ್ ಭಟ್‌ರವರೇ, ನೀವು ಒಂದು ಪ್ರಶ್ನೆಯನ್ನು ಕೇಳಿ.

ಶ್ರೀ ಟಿ. ಪರಮೇಶ್ವರ ನಾಯಕ್: ಮಾನ್ಯ ಅಧ್ಯಕ್ಷರೇ, ಕತ್ತೆಯ ಮೇಲೆ ಕುಳಿತರೆ ಮಾತ್ರ ಕಡಿಯುತ್ತದೆ.

ಶ್ರೀ ಎನ್. ಚಲುವರಾಯ ಸ್ವಾಮಿ: ಮಾನ್ಯ ಸದಸ್ಯರುಗಳು ಗಂಭೀರವಾದಂತಹ ವಿಚಾರಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದೀರಾ, ನನಗೂ ಸಹ ಕನ್‌ಸರ್ನ್ಡ್ ಇದೆ, ನಾನು ಗಂಭೀರವಾಗಿ ಉತ್ತರವನ್ನು ಕೊಡಬೇಕು, ಮತ್ತೆ ಅದನ್ನು ಅಸಕ್ತಿಯಿಂದ ಸರಿಪಡಿಸಬೇಕೆಂಬ ಬಗ್ಗೆ ಇದೆ. ತಾವು ದಯಮಾಡಿ ಅವಕಾಶವನ್ನು ಕೊಟ್ಟರೆ, ಅದರ ಬಗ್ಗೆ ಸ್ಪಂದಿಸುತ್ತೇನೆ. ಇನ್ನು ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿರುವಂತಹ ವಿಚಾರವಾಗಿ ನನಗೆ ಆ ಸಂದರ್ಭದಲ್ಲಿ ಮೊದಲನೆಯ ಫೋನ್ ಕಾಲ್ ಬಂತು. ನನ್ನ ತಾಲ್ಲೂಕಿನ ಒಬ್ಬ ಹುಡುಗ ಮಂಜು ಎನ್ನುವವನು ನನಗೆ ಡೌಟ್ ಬಂದಿದೆ, ಹೋಗುತ್ತಾ ಇದ್ದೇನೆ. ಸಪೋರ್ಟ್ ಮಾಡುತ್ತಾ ಇಲ್ಲ, ಎಂದು ತಿಳಿಸಿದಾಗ ನಾನು ತಕ್ಷಣ ಪೊಲೀಸ್‌ನವರಿಗೆ ಮತ್ತು ಸಂಬಂಧಪಟ್ಟಂತಹ ಇಲಾಖೆಯವರಿಗೆ, ಸೂಚನೆಯನ್ನು ಕೊಟ್ಟು, ಅವರನ್ನು ಹೋಗಬೇಕೆಂದು ಹೇಳಿ, ರಿಪೋರ್ಟ್ ಅನ್ನು ತರಿಸಿ, ಇದರ ಎನ್‌ಕ್ವಾಯರಿಗೆ ಎಂದು ಕಮಿಟಿಯನ್ನು ಕಾನ್‌ಸ್ಟೂಟ್ ಮಾಡಿದ್ದೇವೆ. ಅದು ಎನ್‌ಕ್ವಾಯರಿಯೂ ನಡೆಯುತ್ತಾ ಇದೆ. ಅದರಲ್ಲಿ ಒಬ್ಬ ನಮ್ಮ ಇಲಾಖೆಯ ಅಧಿಕಾರಿ ಇನ್‌ವಾಲ್ವ್ ಆಗಿರುವವರನ್ನು ಸಸ್ಪೆಂಡ್ ಮಾಡಿ, ಕ್ರಿಮಿನಲ್ ಕೇಸನ್ನು ದಾಖಲೆ ಮಾಡಿದ್ದೇವೆ. ಇದರ ಬಗ್ಗೆ ಮುಂದೆ ನಾನು ಡ್ರಗ್ ಕಂಟ್ರೋಲ್‌ನಲ್ಲಿ ಮತ್ತು ನಮ್ಮ ಇಲಾಖೆಯ ವ್ಯವಸ್ಥೆಯನ್ನು ಚುರುಕುಗೊಳಿಸುವ ಬಗ್ಗೆ ಸಹಿತ ನಾವು ಡೈರಕ್ಟ ಕೊಟ್ಟಿದ್ದೇವೆ. ನಮ್ಮ ಮಾನ್ಯ ಬಸವರಾಜ ರಾಯರೆಡ್ಡಿಯವರು ಈಗ ಡ್ರಗ್ ಕಂಟ್ರೋಲರ್ ಸರಿಯಾದ ರೀತಿಯಲ್ಲಿ ಕಳಪೆ ಮತ್ತು ಉತ್ತಮ ಔಷಧಿಯ ಬಗ್ಗೆ ವಿಫಲರಾಗುತ್ತಿದ್ದಾರೆಂಬ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಇನ್ನು ಏನಾದರೂ ಜಾಯಿಂಟ್ ಆಗಿ, ಮತ್ತು ಓವರ್ ಆಲ್ ಇನ್‌ಸ್ಪೆಕ್ಷನ್ ಮಾಡುವಂಥಾದ್ದಕ್ಕೆ ಏನಾದರೂ ಮಾಡಲು ಸಾಧ್ಯವೇ, ಎಂಬ ಬಗ್ಗೆ

ನಾನು ಯೋಚನೆ ಮಾಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಮಾನ್ಯ ರೋಷನ್‌ಬೇಗ್‌ರವರು ಹೇಳಿದಂತಹ ವಿಚಾರವಾಗಿ, ಸೆಂಟ್ರಲ್ ಗೌವರ್ನಮೆಂಟ್‌ನ ಒಂದು ಕಮಿಟಿ ಇದೆ. ಮಾನ್ಯ ಸದಸ್ಯರು ಹೇಳಿದಂತಹ ವಿಚಾರ ಸೂಕ್ತವಿದೆ. ಇವತ್ತು ರೇಟ್ ಬಹಳ ವ್ಯತ್ಯಾಸವಿದೆ. ಇದರ ಬಗ್ಗೆ ಅದನ್ನು ಕಡಿಮೆ ಮಾಡುವಂಥಾದ್ದಕ್ಕೆ, ಸೂಕ್ತವಾದಂತಹ ತೀರ್ಮಾನವನ್ನು ತೆಗೆದುಕೊಳ್ಳುವಂಥಾದ್ದಕ್ಕೆ ಕೂಡ ಸರ್ಕಾರದಿಂದ ಪ್ರಸ್ತಾವನೆಯನ್ನು ಕೊಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ಲಾಜಿಸ್ಟಿಕ್ ಸೊಸೈಟಿ ಎಂದು ಖರೀದಿ ಮಾಡುವಂತಹ ಕೇಂದ್ರಗಳು ಏನು ಇವೆ. ಈ ಲಾಜಿಸ್ಟಿಕ್ ಸೊಸೈಟಿಗಳು ಔಷಧಿಗಳನ್ನು ಖರೀದಿ ಮಾಡಿ, ಅದನ್ನು ಜಿಲ್ಲಾ ಆಸ್ಪತ್ರೆಗಳಿಗೆ ಸಪ್ಲೈ ಮಾಡುವಂತಹ ಕೇಂದ್ರಗಳು ಇವೆ. ಅದರಿಂದ ಸರಿಯಾಗಿ ಔಷಧಿಗಳು ವಿತರಣೆಯಾಗುತ್ತದೆಯೇ? ಎರಡನೆಯದಾಗಿ ಜಿಲ್ಲಾ ಆಸ್ಪತ್ರೆಗಳಿಂದ ಏನು ರಿಕ್ವಿಜೇಷನ್‌ಗಳನ್ನು ಕೊಟ್ಟಿದ್ದಾರೆ. ಅವರು ಆರ್ಡರ್ ಏನು ಕೊಟ್ಟಿದ್ದಾರೆ, ಇವರು ಏನು ಸಪ್ಲೈ ಮಾಡುತ್ತಾರೆಂಬ ಬಗ್ಗೆ ತಾವು ರಿವ್ಯೂ ಮಾಡಬೇಕಾಗಿದೆ. ಇನ್ನು ಆರ್.ಸಿ.ಯಲ್ಲಿ ಇನ್‌ಕ್ಲೂಡ್ ಆಗಿರುವಂತಹ ಅನೇಕ ಸಂಗತಿಗಳು ಇವೆ. ಇದರಲ್ಲಿ ಉದಾಹರಣೆಗೆ ಹೇಳುವುದಾದರೆ ಸೂಚರ್ ಮೆಟೀರಿಯಲ್ಸ್ ಸರಬರಾಜು ಇಲ್ಲದೇ, ಶಸ್ತ್ರಚಿಕಿತ್ಸೆಯನ್ನು ಮಾಡುವುದಕ್ಕೆ ಕಷ್ಟವಾಗುವಂತಹ ಸನ್ನಿವೇಶಗಳು ಇವೆ. ಈ ಹಿನ್ನಲೆಯಲ್ಲಿ ತಕ್ಷಣ ಖರೀದಿಗೆ ಬೇಕಾಗುವಂತಹ ಹಣವನ್ನು ಆಯಾ ಆಸ್ಪತ್ರೆಗಳಿಗೆ ಎಮರ್ಜೆನ್ಸಿ ಫಂಡ್ ಎಂದು ಇಡುವಂತಹ ಏನಾದರೂ ವ್ಯವಸ್ಥೆಯನ್ನು ಮಾಡಿ, ಅದಕ್ಕೆ ಮಾತ್ರ ಆಕೌಂಟ್ ಇಡಿ. ಈ ರೀತಿ ಮಾಡಿದಾಗ ಮಾತ್ರ ತಕ್ಷಣ ಸರಬರಾಜು ಮಾಡುವುದಕ್ಕೆ, ವ್ಯವಸ್ಥೆ ಮಾಡಿದರೆ ಸೇವೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇನ್ನು ವಿಶೇಷವಾಗಿ ತಾವು ಗಮನಿಸಬೇಕು. ಈ ಆ್ಯಂಟಿ ರೇಬಿಸ್ ಆಗಲಿ, ಕ್ಯಾನ್ಸರ್ ಆಗಲಿ, ಮತ್ತು ಬ್ಲಡ್ ಗ್ರೂಪ್ ವ್ಯತ್ಯಾಸವಾದಂತಹ ಸಂದರ್ಭಗಳಲ್ಲಿ, ಅಂತಹ ಸಂದರ್ಭಗಳಲ್ಲಿ ಕೊಡುವಂತಹ ಎಮರ್ಜೆನ್ಸಿ ಔಷಧಗಳು, ಲಭ್ಯವಿರುವುದಿಲ್ಲ. ಶಸ್ತ್ರಚಿಕಿತ್ಸೆಯನ್ನು ಮಾಡುವಂತಹ ಸಂದರ್ಭದಲ್ಲಿ ಬ್ಲಡ್ ಗ್ರೂಪ್ ಬೇರೆ ಇರುವಂತಹ ಸಂದರ್ಭಗಳಲ್ಲಿ ಮಗು ಮತ್ತು ತಾಯಿಯದು, ಅಂತಹ ಸಂದರ್ಭದಲ್ಲಿ ಒಂದು ವಿಶೇಷವಾದಂತಹ ಇಂಜೆಕ್ಷನ್ ಅನ್ನು ಕೊಡಬೇಕಾಗುತ್ತದೆ. ಅಂತಹ ಎಮರ್ಜೆನ್ಸಿ ಔಷಧಗಳನ್ನು ಕೊಡಬೇಕಾಗುತ್ತದೆ. ಇದನ್ನು ಕೊಡುವಂತಹ ವ್ಯವಸ್ಥೆಯನ್ನು ಕೊಡಬೇಕಾಗಿ ನಾನು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯ ಸ್ವಾಮಿ: ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗಿದೆಯೆಂದರೆ ಎಲ್ಲಾ ಸವಲತ್ತುಗಳು ಇದ್ದರೂ ಸಹಿತ, ಅದನ್ನು ಉಪಯೋಗಿಸಿಕೊಳ್ಳುವಂತಹ ಸೀರಿಯಸ್‌ನೆಸ್, ಕಮಿಟ್‌ಮೆಂಟ್, ನಮ್ಮ ಇಲಾಖೆಯ ಎಲ್ಲಾ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಇರಬೇಕಾಗುತ್ತದೆ. ನಾವು ಪ್ರತಿ ದಿವಸವೂ, ಅದನ್ನು ಹೇಳುವಂತಹ ಅವಶ್ಯಕತೆ ಇರುವುದಿಲ್ಲ. ತಮ್ಮ ಜೊತೆಯಲ್ಲಿಯೆ ನಾನು ರೂಪಾಯಿಗಳ ಫಂಡ್ ಇದೆ. ಈ 18ಲಕ್ಷ ರೂಪಾಯಿಗಳ ಫಂಡ್‌ಗೆ ನೀವು ಅಲ್ಲಿ ಕಮಿಟಿಮೆಂಬರ್ ಆಗಿರುತ್ತೀರಿ, ಜಿಲ್ಲಾಧಿಕಾರಿಗಳು ಇರುತ್ತಾರೆ. ಅಲ್ಲಿ ನಿಮಗೆ ಅವಶ್ಯಕತೆ ಇರುವಂಥಾದ್ದನ್ನು ತೆಗೆದುಕೊಳ್ಳುವಂಥಾದ್ದಕ್ಕೆ, ಯಾವುದೇ ರೀತಿಯ ಅಭ್ಯಂತರವೂ ಇಲ್ಲ. ನಾನು ಮೊನ್ನೆ ದಿವಸ ಉಡುಪಿ ಜಿಲ್ಲೆಯ ಆಸ್ಪತ್ರೆಗೆ ಭೇಟಿ ಕೊಟ್ಟಾಗ, ಅಲ್ಲಿ ಅಭಿವೃದ್ಧಿ ಸಮಿತಿ ಯನ್ನು ಮಾಡಿದ್ದಾರೆ. ಅಲ್ಲಿ ಅವರು 50ಲಕ್ಷ ರೂಪಾಯಿಗಳನ್ನು ಖಾಸಗಿಯಾಗಿ ಒದಗಿಸಿಕೊಟ್ಟು, ಅದನ್ನು ಆಸ್ಪತ್ರೆಯ ಇಂಪ್ರೂಮೆಂಟ್‌ಗೆ ಖರ್ಚು ಮಾಡಿದ್ದಾರೆ. ನಾನು ಅವರನ್ನು ಅಭಿನಂದಿಸಿ ಬಂದೆನು. ಅವರು ಒಂದು ಪರ್ಮಿಷನ್ ಅನ್ನು ಕೇಳಿದರು. ನಮ್ಮ ಇಲಾಖೆಯಿಂದ ಪರ್ಮಿಷನ್ ಕೊಡಲು ನಾನು ನಿರ್ದೇಶನವನ್ನು ಕೊಟ್ಟಿದ್ದೇನೆ. ಹಿಂದೆ ಸಲಹಾ ಸಮಿತಿ ಎಂದು ಇತ್ತು, ಈ ರಕ್ಷಣಾ ಸಮಿತಿ ಎಂದು ಮಾಡಿ ತೆಗೆದಿದ್ದಾರೆ. ಆ ಸಲಹಾ ಸಮಿತಿಯನ್ನು ಮುಂದುವರೆಸುವುದಕ್ಕೆ ನಾನು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಈ ಸಮಿತಿಯಲ್ಲಿ ಶಾಸಕರು ಇರುವಂಥಾದ್ದು. ಇನ್ನು ಸೂಚರ್ಸ್ ಬಗ್ಗೆ ನಾವು ಈಗಾಗಲೇ ನಾವು ಪರ್ಚೆಸ್ ಮಾಡುತ್ತಿದ್ದೇವೆ; ಮತ್ತು ಜಿಲ್ಲಾ ಆಸ್ಪತ್ರೆಯಲ್ಲೂ ಸಹ ....

ಶ್ರೀ ಜೆ. ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಬರುವವರೆಗೂ ಶಾಸಕರು ಇದ್ದದ್ದು, ಅದನ್ನು ಏಕೆ ಬದಲಾವಣೆಯನ್ನು ಮಾಡಿದ್ದಾರೊ, ಗೊತ್ತಿಲ್ಲ.

ಶ್ರೀ ಎನ್. ಚಲುವರಾಯ ಸ್ವಾಮಿ: ಈಗ ಅದನ್ನು ಮುಂದುವರೆಸೋಣ. ಇನ್ನು ಈ ಸೂಚರ್ಸ್ ಬಗ್ಗೆ ನಾನು ಆಗಲೇ ಹೇಳಿದ ಹಾಗೆ, ಎಲ್ಲಾ ಕನಿಷ್ಟ ತಾಲ್ಲೂಕು ಆಸ್ಪತ್ರೆಗಳಲ್ಲೂ 50ಸಾವಿರ ರೂಪಾಯಿಗಳಿಂದ 1 ಲಕ್ಷ ರೂಪಾಯಿಗಳವರೆಗೂ ದುಡ್ಡು ಇದೆ. ನಾನು ಹೋದ ಕಡೆಗಳಲೆಲ್ಲಾ ಹೇಳಿ ಬಂದಿದ್ದೇನೆ ಮತ್ತೆ ಒಂದೆರಡು ಕಡೆಗಳಲ್ಲಿ ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ಇಲ್ಲಿ ದಿವಸವೂ ಸಸ್ಪೆಂಡ್ ಮಾಡುವಂಥಾದ್ದು ಒಳ್ಳೆಯ ಕ್ರಮವಲ್ಲವೆಂದು ಎಚ್ಚರಿಕೆಯನ್ನು ಕೊಟ್ಟಿದ್ದೇನೆ, ಪತ್ರಿಕೆಗಳಲ್ಲೂ ಸಹ ಹೇಳುತ್ತಿದ್ದೇನೆ.

ಪ್ರತಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಕನಿಷ್ಟ ಹಣ ಅವರ ಅಕೌಂಟ್‌ನಲ್ಲಿ ಇದೆ. ಅವರು ಈ ರೀತಿಯ ಅವಶ್ಯಕತೆ ಇರುವಂತಹದ್ದು ತೆಗೆದುಕೊಳ್ಳುವುದಕ್ಕೆ ಯಾವುದೇ ಅಭ್ಯಂತರವೂ ಇಲ್ಲ. ಅವರು ಅದನ್ನು ತೆಗೆದುಕೊಳ್ಳಬಹುದು. ಇದರ ಬಗ್ಗೆ ಇಲಾಖೆಯವರಿಂದ ಮತ್ತೊಮ್ಮೆ ಡೈರಕ್ಷನ್ ಕೊಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಸಲಹೆ, ಈ ಎಲ್ಲಾ ಜಿಲ್ಲೆಗಳಲ್ಲೂ ಒಂದೇ ರೀತಿಯ ಮೆಡಿಸನ್‌ನ ಅಗತ್ಯತೆ ಇಲ್ಲ. ಇಲ್ಲಿ ನೀವು ಏನು ಔಷಧಿಯನ್ನು ಖರೀದಿ ಮಾಡುತ್ತೀರಿ, ಅದಕ್ಕೆ ಮೊದಲು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಿಂದ ಪಟ್ಟಿಯನ್ನು ತರಿಸಿಕೊಳ್ಳಿ. ಅಲ್ಲಿ ಯಾವುದು ಅವಶ್ಯಕತೆ ಇರುತ್ತದೊ, ಆ ಔಷಧಿಯನ್ನು ಮಾತ್ರ ಕಳುಹಿಸಿ, ಎಲ್ಲವನ್ನು ಅಲ್ಲಿಗೆ ಕಳುಹಿಸುವಂತಹ ಅಗತ್ಯತೆ ಇಲ್ಲವೆಂದು ಕಾಣುತ್ತದೆ.

ಶ್ರೀ ಎನ್. ಚಲುವರಾಯ ಸ್ವಾಮಿ: ನಾನು ಈಗಾಗಲೇ ಇದರ ಬಗ್ಗೆ ರೆವ್ಯೂ ಮೀಟಿಂಗ್‌ನಲ್ಲಿ ಜಿಲ್ಲಾ ಸರ್ಜನ್‌ಗಳಿಗೆ ಮತ್ತು ಡಿ.ಹೆಚ್.ಒ.ಗಳಿಗೆ ಸ್ಪಷ್ಟವಾಗಿ ನಿರ್ದೇಶನವನ್ನು ಕೊಟ್ಟಿದ್ದೇನೆ. ಅಲ್ಲಿಗೆ ಅವಶ್ಯಕತೆ ಇರುವಂಥಾದ್ದು ಅಲ್ಲಿಗೆ ಸಪ್ಲೈ ಇಲ್ಲದೇ ಇರುವಂಥಾದ್ದು ಇದ್ದರೆ, ಅವರು ನಮಗೆ ಇಂಡೆಂಟ್ ಕೊಟ್ಟರೆ ಅದನ್ನು ನಾವು ಸಪ್ಲೈ ಮಾಡುತ್ತೇವೆ.

ಅಧ್ಯಕ್ಷರು: ಈಗ ಏನಾಗಿದೆಯೆಂದರೆ ಪ್ರಶ್ನೋತ್ತರ ವೇಳೆ 2 ಗಂಟೆ 12 ನಿಮಿಷಗಳ ಕಾಲ ನಡೆದಿದೆ. ಇದೇ ಕೊನೆ, ನಾಳೆಯಿಂದ, ಒಂದು ಗಂಟೆ ಕಾಲಾವಧಿಯಾದ ತಕ್ಷಣ ಅದು ಎಲ್ಲಿಗೆ ಇರಲಿ, ಆ ಪ್ರಶ್ನೆಗೆ ನಾನು ನಿಲ್ಲಿಸುತ್ತೇನೆ, ಅದು ಲ್ಯಾಪ್ಸ್ ಆದರೂ ನಿಲ್ಲಿಸುತ್ತೇನೆ. ಅದುದರಿಂದ ದಯಮಾಡಿ, ಎಲ್ಲಾ ಸದಸ್ಯರಲ್ಲೂ ಮನವಿ ಮಾಡುತ್ತೇನೆ. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಇಲಾಖೆ) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 11 ಪಟ್ಟಿಯಲ್ಲಿರುವ 137 ಪ್ರಶ್ನೆಗಳ ಪೈಕಿ 120 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಿನಾಂಕ 16.3.05ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು 137 ಪ್ರಶ್ನೆಗಳ ಪೈಕಿ 129 ಪ್ರಶ್ನೆಗಳ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಮಂಡಿಸಲಾಯಿತು.